ಬಸವಗೀತೆ

ಸತ್ಯ ಸಂವಾದ -357

- ಬಸವರಾಜ ಸ್ವಾಮಿ

9980553750

ಇನ್ನೂ ಸೂರ್ಯೋದಯವಾಗಿಲ್ಲ. ಶರಣರು ತಮ್ಮ ತಮ್ಮ ಬೆಳಗಿನ ಕೆಲಸಗಳನ್ನು ಮುಗಿಸಿಕೊಂಡು ಲಗುಬಗೆಯಿಂದ ಸತ್ಸಂಗಕ್ಕಾಗಿ ಮಹಾಮನೆಗೆ ನಡೆದಿದ್ದಾರೆ. ವೇದಿಕೆ ಮೇಲೆ ಕುಳಿತಿದ್ದ ಬಸವಣ್ಣನವರಿಗೆ ಹಣೆಮಣಿದು ಶರಣು ಶರಣಾರ್ಥಿ ಎಂದು ಕುಳಿತುಕೊಳ್ಳುತ್ತಾರೆ.

ಕದಿರ ರೆಮ್ಮವ್ವೆ :

ಅಷ್ಟ ವಿಧಾರ್ಚನೆ ಷೋಡಶೋಪಚಾರವ
ಮಾಡುವ ಹಮ್ಮಿನಲ್ಲಿ ಬೆಂದೆನಯ್ಯಾ .
ಗುರುವೆಂದರಿಯೆ, ಲಿಂಗವೆಂದರಿಯೆ,
ಜಂಗಮವೆಂದರಿಯೆ, ಪ್ರಸಾದವೆಂದರಿಯೆ !
ಆನು ಬೆಂದೆನಯ್ಯಾ , ಕೂಡಲಸಂಗಮದೇವಾ
ಆನು ಮಾಡುವುದೆಲ್ಲ ಬರಿಯ ಉಪಚಾರವಯ್ಯಾ ! ॥ 384 ॥

ತಾವು ದಾಖಲಿಸಿದ ಈ ವಚನದ ಬೆಡಗನ್ನು ವಿವರಿಸಿ ಹೇಳಿ ಬಸವರಸ?

ಬಸವಣ್ಣ : ಅಷ್ಟ ವಿಧಾರ್ಚನೆ : ಜಲ, ವಿಭೂತಿ, ಗಂಧಾಕ್ಷತೆ, ಪತ್ರಿ-ಪುಷ್ಪ, ಧೂಪ, ದೀಪ, ನೈವೇದ್ಯ , ವಂದನೆ.

ಷೋಡಶೋಪಚಾರ : ಅಭಿಷೇಕ, ವಿಭೂತಿ, ಗಂಧ, ಅಕ್ಷತೆ, ರುದ್ರಾಕ್ಷಿ , ಪತ್ರೆ , ಪುಷ್ಪ, ಧೂಪ, ದೀಪ, ಘಂಟಾನಾದ, ನೈವೇದ್ಯ, ಗೀತ, ಫಲ-ತಾಂಬೂಲ, ಸ್ತೋತ್ರ, ಪ್ರದಕ್ಷಿಣೆ, ನಮಸ್ಕಾರ. ಹೀಗೆ ಅಷ್ಟ ವಿಧದಿಂದ, ಷೋಡೋಶೋಪಚಾರದಿಂದ ದಣಿಯುತ್ತ ನಿತ್ಯ ಪೂಜಿಸಿ ಪೂಜಿಸಿ ಆಯುಷ್ಯವಿಡೀ ವ್ಯರ್ಥ ಕಳೆಯುತ್ತೇನೆ. ಶಬ್ದದಿಂದ, ದೃಶ್ಯದಿಂದ, ರುಚಿಯಿಂದ ಮುಕ್ತನಾಗುವುದು ಸಾಧ್ಯವಾಗುವುದಿಲ್ಲ.

ಢಕ್ಕೆಯ ಬೊಮ್ಮಣ್ಣ : ಗುರುವೆಂದರಿಯೆ, ಲಿಂಗವೆಂದರಿಯೆ, ಜಂಗಮವೆಂದರಿಯೆ, ಪ್ರಸಾದವೆಂದರಿಯೆ ! ಆನು ಬೆಂದೆನಯ್ಯಾ ಎಂದು ಹೇಳಲು ಕಾರಣವೇನು ಬಸವರಸ?

ಬಸವಣ್ಣ : ತನುವಿನಲ್ಲಿ ನುಡಿಯಲು ಬಾರದ ನುಡಿಯಿಂದ ನುಡಿದು ಹೇಳುವ ಅರಿವೆಂಬ ಗುರುವಿದ್ದಾನೆ. ಆತನನ್ನು ತಿಳಿಯಲಿಲ್ಲ. ತನುವಿನ ಕಣ ಕಣದಲ್ಲಿ ಅರಿವೆಂಬ ಲಿಂಗವಿದೆ. ಅದನ್ನು ತಿಳಿಯಲಿಲ್ಲ. ಗುರುವಿನ ವಾಕ್ಯ ಪಾಲಿಸುವ ಜಂಗಮನಿದ್ದಾನೆ. ಆತನನ್ನು ತಿಳಿಯಲಿಲ್ಲ.

ಪ್ರಸಾದವೆಂದರಿಯೆ : ಸ್ಪರ್ಶಿಸಿದರೆ ದೇಹ ಕಾಮದಿಂದ ತಲ್ಲಣಗೊಳ್ಳುತ್ತದೆ. ಸ್ಪರ್ಶ, ದೇಹಕ್ಕೆ ಅರಿವಾಗಿ ಪ್ರಸಾದವಾಗಲಿಲ್ಲ. ನೋಡಿದರೆ ಕಣ್ಣು ಬೆಂಕಿ ಉಗುಳುತ್ತದೆ. ನೋಟದ ಬೆಳಕು ಕಣ್ಣಿಗೆ ಪ್ರಸಾದವಾಗಲಿಲ್ಲ. ರುಚಿಸಿದರೆ ತನು ಕೆಂಡಕಾರುತ್ತದೆ. ಪದಾರ್ಥ ನಾಲಿಗೆಗೆ ಪ್ರಸಾದವಾಗಲಿಲ್ಲ. ಮೂಸಿಸಿದರೆ ದೇಹ ನರಕ ಬಾಧೆಯಿಂದ ನರಳುತ್ತದೆ. ವಾಸನೆ ಮೂಗಿಗೆ ಪ್ರಸಾದವಾಗಲಿಲ್ಲ. ಶಬ್ದ ಬಡಿದರೆ ದೇಹ ಕಿಡಿ ಕಾರುತ್ತದೆ. ಶಬ್ದ ಕಿವಿಗೆ ಪ್ರಸಾದವಾಗಲಿಲ್ಲ.

ಊಟ ತನುವಿಗೆ ಪ್ರಸಾದವಾಗಿ ರಕ್ತ ಮೂಳೆ ಮಾಂಸ ಗಟ್ಟಿಗೊಂಡು ಚರ್ಮಕ್ಕೆ ಕಾಂತಿ ನೀಡುತ್ತದೆ. ಅಜೀರ್ಣವಾದರೆ ತನುವಿಗೆ ಸಂಕಟವನ್ನೊಡ್ಡುತ್ತದೆ. ಹೀಗೆಯೇ ನೋಡುವ ನೋಟ, ಕೇಳುವ ಕಣ್ಣು, ಮೂಸಿಸುವ ವಾಸನೆ, ಮುಟ್ಟುವ ಸ್ಪರ್ಶ, ರುಚಿಸುವ ಪದಾರ್ಥದ ರುಚಿಗಳೆಲ್ಲ ತನುವಿಗೆ ಪ್ರಸಾದವಾಗಬೇಕಲ್ಲ !

ಮನ, ಕೃತ್ರಿಮ ಸುಖ ದುಃಖಗಳನ್ನು ಸೃಷ್ಟಿಸಿಕೊಂಡು ಒಮ್ಮೆ ತನುವನ್ನು ಅರಳಿಸುತ್ತದೆ ಮತ್ತೊಮ್ಮೆ ಕೆರಳಿಸುತ್ತದೆ. ಅರಳುವುದು ಕೆರಳುವುದು ಅಜೀರ್ಣವೆಂದು ಮನಕ್ಕೆ ತಿಳಿಯುವುದಿಲ್ಲ. ಸುಖ ದುಃಖಗಳು ತನುವಿನಲ್ಲಿ ಜೀರ್ಣವಾಗದೆ ಉಳಿದು ತನು ಇರುವವರೆಗೆ ನೆನಪಿಗೆ ಬಂದು, ತನುವನ್ನು ಸುಖದುಃಖಕ್ಕೆ ಈಡುಮಾಡುತ್ತದೆ. ಅಂದಮೇಲೆ ರುಚಿಸಿದ್ದು, ಮೂಸಿಸಿದ್ದು , ಮುಟ್ಟಿದ್ದು, ನೋಡಿದ್ದು, ಕೇಳಿದ್ದು ತನುವಿಗೆ ಪ್ರಸಾದವಾಗಲಿಲ್ಲ.

ಅಷ್ಟ ವಿಧಾರ್ಚನೆ, ಷೋಢಶೋಪಾಚಾರದಿಂದ ದೇವರನ್ನು ಪೂಜಿಸಿದರೂ ಆ ದೇವರು ದೇಹದ ಬಾಧೆ ನಿಲ್ಲಿಸಲಿಲ್ಲ ! ನಿತ್ಯ ನಿತ್ಯ ಪೂಜಿಸುವೆನೆಂಬ ಅಹಂಕಾರದಿಂದ ದೇಹ ಬೆಂದು ಸುಣ್ಣವಾಯಿತು. ತನುವಿನಲ್ಲಿ ತನ್ಮಯವಾದ ಅರಿವೆಂಬ ಗುರುವನ್ನು ಅರಿಯಲಿಲ್ಲ. ಅಂಗದಲ್ಲಿಯೇ ಸಮರಸವಾಗಿ ಬೆರೆತ ಲಿಂಗವನ್ನು ಅರಿಯಲಿಲ್ಲ. ಸುಖ ದುಃಖಗಳನ್ನು ಸ್ವೀಕರಿಸಿ, ಅಂಗಕ್ಕೆ ಸುಖದ ಸುಖವನ್ನುಂಟುಮಾಡುವ ಜಂಗಮನನ್ನು ಮನ ಅರಿಯದಿದ್ದಕ್ಕಾಗಿ ತನು ಕ್ಷಣ ಕ್ಷಣಕೂ ಬಳಲುತ್ತದೆ, ಬೇಯುತ್ತದೆ. ಮನ ಮಾಡುವುದೆಲ್ಲ ಬರೀ ಉಪಚಾರಕ್ಕೆಂದು ಮನಕ್ಕೆ ತಿಳಿಯದೆ ತನುವನ್ನು ಸಂಕಟಕ್ಕೀಡು ಮಾಡುತ್ತದೆ.

ಕೊಟ್ಟಣದ ಸೋಮಮ್ಮ : ಧನ್ಯರಾದೆವು ಬಸವರಸ. ಈ ವಚನವನ್ನು ಸಕಲ ಶರಣರಿಗೂ ತಿಳಿಯುವಂತೆ ಹೇಳಿದಿರಿ ತಮಗೆ ಶರಣು ಶರಣಾರ್ಥಿ.

ಬಸವಣ್ಣ: ಇಂದಿಗೆ ಇಷ್ಟು ಸಾಕು ತಮ್ಮೆಲ್ಲರಿಗೂ ಶರಣು ಶರಣಾರ್ಥಿ ಎನ್ನುತ್ತಾ ಸಭೆಗೆ ಮಂಗಲ ಹಾಡಿದರು.

ಸತ್ಸಂಗದ ಸವಿಯನುಂಡ ಅಮಲಿನಲ್ಲಿ ತೇಲಾಡುತ್ತ ಶರಣರು ತಮ್ಮ ಮನೆಗೆ ನಡೆದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ

ವಿವಿಧ ಯೋಜನೆಗಳ ಪ್ರಗತಿಗೆ ಅಧಿಕಾರಿಗಳ ಪಾತ್ರ ಪ್ರಮುಖ : ಜಿಲ್ಲಾಧಿಕಾರಿ ನಿತೀಶ ಕೆ.

• **ಸುದ್ದಿಮೂಲ ವಾರ್ತೆ** ರಾಯಚೂರು, ಆ.27: **ಜಿಲ್ಲೆಯ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಜಾರಿಗೆ ತರಲಾಗಿದ್ದು, ಈ ಯೋಜನೆಗಳ ಪ್ರಗತಿ ಸಾಧಿಸಲು ಸಂಬಂಧಿಸಿದ ಅಧಿಕಾರಿಗಳ ಪಾತ್ರ ಪ್ರಮುಖವಾಗಿದೆ ಎಂದು ಜಿಲ್ಲಾಧಿಕಾರಿಗಳಾದ ನಿತೀಶ ಕೆ. ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.**

ಅವರು ಆ.27ರ ಮಂಗಳವಾರ ದಂದು ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳು ಹಾಗೂ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು, ಸಿಬ್ಬಂದಿ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕಾಗಿದೆ. ಯಾವುದೇ ಯೋಜನೆಯನ್ನು ಅನುಷ್ಠಾನಗೊಳಿಸಲು ಇಚ್ಛಾಶಕ್ತಿ ಅತ್ಯವಶ್ಯಕವಾಗಿದ್ದು, ಇಚ್ಛಾಶಕ್ತಿಯಿಂದ ಕಾರ್ಯನಿರ್ವಹಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಇಲಾಖೆಯ ಪ್ರತಿಯೊಬ್ಬ ಅಧಿಕಾರಿ, ಸಿಬ್ಬಂದಿ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಹಾಗೂ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವ ಮೂಲಕ ಸಮರ್ಪಣಾ ಮನೋಭಾವದಿಂದ ಕಾರ್ಯನಿರ್ವಹಿಸಿದಾಗ ಉತ್ತಮ ಫಲಿತಾಂಶ ದೊರೆಯುತ್ತದೆ ಆ ನಿಟ್ಟಿನಲಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಜಿಲ್ಲೆಯಲ್ಲಿ ಒಟ್ಟು 2856 ಅಂಗನವಾಡಿ ಕೇಂದ್ರಗಳು, 32 ಮಿನಿ ಅಂಗನವಾಡಿ ಕೇಂದ್ರಗಳಿವೆ. ಇವುಗಳಲ್ಲಿ 2024-25ನೇ ಸಾಲಿನ ಜುಲೈ ಅಂತ್ಯಕ್ಕೆ 2,24,630 ಫಲಾನುಭವಿಗಳು ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಪ್ರಯೋಜನ ಪಡೆದುಕೊಂಡಿದ್ದಾರೆ ಎಂದರು.

ಅಂಗನವಾಡಿ ಕೇಂದ್ರಗಳ ಮೂಲಕ ಪೂರಕ ಪೌಷ್ಟಿಕ ಆಹಾರ ವಿತರಣೆ ಕಾರ್ಯಕ್ರಮ, ಚುಚ್ಚುಮದ್ದು ಕಾರ್ಯಕ್ರಮ, ಆರೋಗ್ಯ ತಪಾಸಣೆ, ತಾಯಂದಿರಿಗೆ ಆರೋಗ್ಯ ಮತ್ತು ಪೌಷ್ಟಿಕ ಶಿಕ್ಷಣ, ಶಾಲಾ ಪೂರ್ವ ಶಿಕ್ಷಣ ಹಾಗೂ ಮಾಹಿತಿ ಸೇವೆಯನ್ನು ಇಲಾಖೆಯಿಂದ ಒದಗಿಸಲಾಗುತ್ತಿದ್ದು, ಈ ಸೇವೆಗಳನ್ನು ಒದಗಿಸಲು ಹೆಚ್ಚಿನ ರೀತಿಯಲ್ಲಿ ಕಾರ್ಯ ನಿರ್ವಹಿಸುವಂತೆ ತಿಳಿಸಿದರು.

ಈ ವೇಳೆ ಕೌಂಟಬಿಕ ದೌರ್ಜನ್ಯ ಯೋಜನೆ, ಬಾಲಕಿಯರ ವಸತಿ ಯೋಜನೆ, ಸಖಿ ಓನ್ ಸ್ಟಾಪ್ ಸೆಂಟರ್, ಒನ್ ಸ್ಟಾಪ್ ಸೆಂಟರ್, ಸ್ವಧಾರ ಕೇಂದ್ರ, ಸ್ವಧಾರ ಯೋಜನೆ, 2024ರ ಎಪ್ರಿಲ್ ರಿಂದ ಜೂನ್‌ರ ಬಾಲ್ಯವಿವಾಹ ಅನುಸರಣಾ ಮಾಹಿತಿ, ಉದ್ಯೋಗ್ಯಸ್ಥ ಮಹಿಳೆಯರ ವಸತಿ ನಿಲಯದ ವಿವರ, ಮಿಷನ್ ಶಕ್ತಿ ಯೋಜನೆ ಸಭಾ ಕಾರ್ಯಸೂಚಿ, ಜಿಲ್ಲಾ ಮಹಿಳಾ ಸಬಲೀಕರಣ ಘಟಕದಿಂದ ನಡೆಯುತ್ತಿರುವ ಕಾರ್ಯಕ್ರಮಗಳು, 2023-24ನೇ ಸಾಲಿನ ಚೇತನ, ಧನಶ್ರೀ, ಉದ್ಯೋಗಿನಿ ಯೋಜನೆಯ ಫಲಾನುಭವಿಗಳ ಆಯ್ಕೆಯ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಬಾಲ್ಯವಿವಾಹ ತಡೆಗೆ ಜಾಗೃತಿ ಮೂಡಿಸಿ: ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಬಾಲ್ಯ ವಿವಾಹ ತಡೆಗೆ ಸಾರ್ವಜನಿಕರಲ್ಲಿ ಹೆಚ್ಚಿನ ಮಟ್ಟದ ಅರಿವು ಮೂಡಸಲು ಜಾಗೃತಿ ಕಾರ್ಯಕ್ರಮಗಳ ಮೂಲಕ ಬಾಲ್ಯ ವಿವಾಹಕ್ಕೆ ತಡೆ ನೀಡಬೇಕು. ಅಲ್ಲದೆ ಜಿಲ್ಲೆಯ ಪ್ರತಿ ಗ್ರಾಮ ಮಟ್ಟದಲ್ಲಿ ಪೋಷಕರ ಒಳಗೊಂಡ ಜಾಗೃತಿ ಸಭೆಗಳು ನಡೆಸಲು ಅಧಿಕಾರಿಗಳು ಸಿದ್ಧತೆ ಮಾಡಿಕೊಳ್ಳಬೇಕು. ಪೋಶನ್ ಅಭಿಯಾನ ಯೋಜನೆ ಟ್ರ್ಯಾಕ್ ನಲ್ಲಿ ಮಾಹಿತಿ ಅಳವಡಿಕೆ ವ್ಯವಸ್ಥೆಯನ್ನು ಇನ್ನಷ್ಟು ಉತ್ತಮಪಡಿಸಿ ಪ್ರಗತಿಯನ್ನು ಸಾಧಿಸಬೇಕೆಂದರು.

ಇದೇ ಸಂದರ್ಭದಲ್ಲಿ ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಹೆಚ್.ಎ.ಸಾತ್ವಿಕ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರೀಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ನವೀನ್ ಕುಮಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಸುರೇಂದ್ರ ಬಾಬು, ಜಿಲ್ಲಾ ಕೈಗಾರಿಕಾರಿ ಅಧಿಕಾರಿ ಬಸವರಾಜ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಮುದುಕಪ್ಪ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಜಿಲ್ಲೆಯ ಎಲ್ಲ ತಾಲೂಕಿನ ಮಹಿಳ ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಹಾಗೂ ವಿವಿಧ ಯೋಜನೆಗಳ ಫಲಾನುಭವಿಗಳ ಇದ್ದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ; ವಸತಿ ನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

• **ಸುದ್ದಿಮೂಲ ವಾರ್ತೆ** ರಾಯಚೂರು, ಆ.27: ಇಲ್ಲಿಯ ತಾಲೂಕು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ 2024-25ನೇ ಸಾಲಿನ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ಅಥವಾ ಬಾಲಕಿಯರ ವಸತಿ ನಿಲಯಗಳ ಪ್ರವೇಶಾತಿಗಾಗಿ ಅನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಸಾಮಾನ್ಯ ಪದವಿ ಮಟ್ಟದ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ನೀಡಲಾಗಿದ್ದು ಇಲಾಖೆಯ ವೆಬ್‌ಸೈಟ್ ವಿಳಾಸ: https//shp.karnataka.gov.in ನಲ್ಲಿ ಇದೇ 2024ರ ಸೆ.12ರೊಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಕೊನೆಯ ದಿನಾಂಕದ ನಂತರ ಸ್ವೀಕೃತವಾಗುವ ಅರ್ಜಿ/ಕೋರಿಕೆಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರಾಯಚೂರ ತಾಲೂಕು ವಿಸ್ತರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

NOTICE

IN THE COURT OF HON'BLE 1st JUNIOR CIVIL JUDGE: CITY CIVIL COURT AT SECUNDERABAD
O.S.NO. 1040 OF 2021

Between :
M/s. PRITHVI TEXTILE, Rep. by Its Partner, Sri Prakesh Chand Luniya, S/o. Late Mangilal Luniya, Age : 72 yrs, Occ : Business, R/o. Off # 3-4-258, Gunj Bazar, secunderabad-3.
.....Plaintiff.

AND

1. M/s. COTTON LINEN CLUB, Rep. by its Proprietor/Authorized Person Sri Lokesh, S/o. Not knownto the Plaintiff. Age : Major, Occ : Business. 2. Sri Lokesh, S/o Not Known to the Plaintiff, Age : Major, Occ : Business Prop/Authorized Signatory M/s. Cotton Linen Club.
Both R/o. # 11th Ward, oor No.66. Beside SBI Bank, Kustangi Road, Sindhnur, Karnataka.
..... Defendant No. 1&2.

Whereas the Plaintiff herein have filed the above mention suit for recovery of money against defendants. The case stands posted to 05-09-2024 at 10.30 AM for appearance of defendants in the above said court.

Therefore take notice that if defendants failed to appear on the said date and time Hon'ble court the matter will be decided as ex-parte.

// By Order of the Court //
Counsel for the Plaintiff.
Sd/- Shreekanth Bangray
Advocate.
(Mob. 9246889188)

ಸಂ:ಸನಿ13/ನೋಂ/56167/2023-24 **Email : amssn2024@gmail.com**

ಆಪ್ತಮಿತ್ರ ಸಹಕಾರ ಸಂಘ ನಿಯಮಿತ.
ಹಟ್ಟಿ ರಸ್ತೆ, ಸಿಂಧನೂರು. ಮೊ.9449550055, 9845477412

1ನೇ ವಾರ್ಷಿಕ ಮಹಾಸಭೆಯ ನೋಟಿಸ್

ಮಾನ್ಯ ಸದಸ್ಯರೇ,

ಆಪ್ತಮಿತ್ರ ಸಹಕಾರ ಸಂಘ ನಿಯಮಿತ 2023-24 ನೇ ಸಾಲಿನ 1ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ 17-09-2024 ಮಂಗಳವಾರ ಬೆಳಗ್ಗೆ 11 ಗಂಟೆಗೆ ಸಹಕಾರಿಯ ಆವರಣದಲ್ಲಿ ಕರೆಯಲಾಗಿದೆ. ಈಗಾಗಲೇ ಸದಸ್ಯರಿಗೆ ಮಹಾಸಭೆಯಲ್ಲಿ ಚರ್ಚಿಸಲಿರುವ ವಿಷಯಗಳನ್ನೊಳಗೊಂಡ ನೋಟೀಸ್‌ಗಳನ್ನು ಅಂಚೆಯ ಮೂಲಕ ಮತ್ತು ನೇರವಾಗಿ ಕಳುಹಿಸಲಾಗಿದೆ. ನೋಟಿಸ್ ತಲುಪದ ಸದಸ್ಯರು ಈ ಪ್ರಕಟಣೆಯನ್ನೇ ನೋಟಿಸ್ ಎಂದು ಪರಿಗಣಿಸಿ ಸಭೆಯಲ್ಲಿ ಹಾಜರಿರಲು ಕೋರಲಾಗಿದೆ.

ದಿನಾಂಕ : 26-08-2024.
ಸ್ಥಳ : ಸಿಂಧನೂರು.

ಸಹಿ/-	ಸಹಿ/-	ಸಹಿ/-
ಅಮರೇಶ ಅಲಬನೂರು	ಖಾಸಿಂ ಖುರೇಷಿ ದಿದ್ದಿಗಿ	ಬಸವರಾಜ ಪಿ. ಬಿರದಾರ
ಅಧ್ಯಕ್ಷರು	ಉಪಾಧ್ಯಕ್ಷರು	ಮುಖ್ಯ ಕಾರ್ಯನಿರ್ವಾಹಕರು

ಅಂಚೆ ಇಲಾಖೆ; ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

• **ಸುದ್ದಿಮೂಲ ವಾರ್ತೆ** ರಾಯಚೂರು, ಆ.27: ಅಂಚೆ ಇಲಾಖೆಯಿಂದ ದೀನ್ ದಯಾಳ್ ಸ್ಪರ್ಶ ಯೋಜನೆಗೆ 6ನೇ ತರಗತಿಯಲ್ಲಿ ಓದುತ್ತಿರುವ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಭಾರತೀಯ ಅಂಚೆ ಇಲಾಖೆ ಅಧೀಕ್ಷಕರು ತಿಳಿಸಿದ್ದಾರೆ.

9ನೇ ತರಗತಿಯ ಶಾಲಾ ಮಕ್ಕಳಲ್ಲಿ ಅಂಚೆ ಚೀಟಿಗಳ ಸಂಗ್ರಹವನ್ನು ಉತ್ತೇಜಿಸಲು ದೀನ್ ದಯಾಳ್ ಸ್ಪರ್ಶ್ ಯೋಜನೆ ಅಡಿಯಲ್ಲಿ ವಿದ್ಯಾರ್ಥಿವೇತನವನ್ನು ನೀಡುವುದು. ಸ್ಪರ್ಶ ಎಂದರೆ ಸ್ಟಾಂಪ್‌ಗಳಲ್ಲಿ ಅಭಿರುಚಿ ಮತ್ತು ಸಂಶೋಧನೆಯನ್ನು ಹವ್ಯಾಸವಾಗಿ ಉತ್ತೇಜಿಸಲು, ಶೈಕ್ಷಣಿಕ ಪಠ್ಯಕ್ರಮವನ್ನು ಬಲಪಡಿಸಲು ಮತ್ತು ಪೂರಕವಾಗಿ ಸಮರ್ಥನೀಯ ರೀತಿಯಲ್ಲಿ ಚಿಕ್ಕ ವಯಸ್ಸಿನಲ್ಲಿ ಮಕ್ಕಳಲ್ಲಿ ಅಂಚೆ ಚೀಟಿಗಳ ಸಂಗ್ರಹವನ್ನು ಉತ್ತೇಜಿಸುವುದು ವಿದ್ಯಾರ್ಥಿವೇತನದ ಉದ್ದೇಶವಾಗಿದೆ.

ವಿಶ್ರಾಂತಿ ಮತ್ತು ಒತ್ತಡ ನಿವಾರಿಸಲು ಸಹಾಯ ಮಾಡುತ್ತದೆ. ಯೋಜನೆಯಡಿಯಲ್ಲಿ 2023-24 ಶೈಕ್ಷಣಿಕ ವರ್ಷದಲ್ಲಿ 60 ಅಂಕಗಳನ್ನು ಹೊಂದಿರುವ ಮತ್ತು ಅಂಚೆ ಚೀಟಿಗಳ ಸಂಗ್ರಹದ ಠೇವಣಿ ಖಾತೆ, ಫಿಲಾಟೆಲಿಕ್ ಕ್ಲಬ್‌ನ ಸದಸ್ಯ ಮತ್ತು ಅಂಚೆ ಚೀಟಿ ಸಂಗ್ರಹವನ್ನು ಹವ್ಯಾಸವಾಗಿ ಮುಂದುವರಿಸುವ 6ರಂದ 9ನೇ ತರಗತಿಯ ವಿದ್ಯಾರ್ಥಿಗಳಿಗೆ 6000 ರೂ. ವಿದ್ಯಾರ್ಥಿವೇತನ ನೀಡಲಾಗುತ್ತದೆ.

ಅಂಚೆ ಚೀಟಿಗಳ ಸಂಗ್ರಹದ ರಸಪ್ರಶ್ನೆ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ. ಅಂಚೆ ಚೀಟಿಗಳ ಸಂಗ್ರಹದ ರಸಪ್ರಶ್ನೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಅಂಚೆ ಇಲಾಖೆಯು ನೀಡುವ ಅಂಚೆ ಚೀಟಿಗಳ ಸಂಗ್ರಹ ಯೋಜನೆಯಲ್ಲಿ ಯಶಸ್ವಿಯಾಗಿ ಸ್ಪರ್ಧಿಸಬೇಕಾಗುತ್ತದೆ. ಹಂತ-1 ಅಂಚೆ ಚೀಟಿಗಳ ಸಂಗ್ರಹದ ರಸ ಪ್ರಶ್ನೆಯಲ್ಲಿ ಭಾಗವಹಿಸಲು ಸೆಪ್ಟೆಂಬರ್ 3ರ ಒಳಗೆ ಅರ್ಜಿ ಸಲ್ಲಿಸಬೇಕು. ಕರ್ನಾಟಕದ ಎಲ್ಲ ಶಾಲೆಗಳು ತಮ್ಮ ವಿದ್ಯಾರ್ಥಿಗಳನ್ನು ವಿದ್ಯಾರ್ಥಿವೇತನ ಯೋಜನೆಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು.

ಹೆಚ್ಚಿನ ಮಾಹಿತಿಗಾಗಿ www.indiapost.gov.in ಹಾಗೂ www.karnataka-post.gov.in ನಲ್ಲಿ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಸ್ಕಿ ಕಾಣೆಯಾದವರ ಪತ್ತೆಗೆ ಮನವಿ

• **ಸುದ್ದಿಮೂಲ ವಾರ್ತೆ** ಮಸ್ಕಿ , ಆ.27: ಈ ಮೇಲ್ಕಾಣಿಸಿದ ಭಾವಚಿತ್ರದಲ್ಲಿರುವ ವೀರೇಂದ್ರ ಪಾಟೀಲ್ ಈತನು ವ್ಯವಸಾಯ ಮಾಡಿಕೊಂಡು ಜೀವನ ಸಾಗಿಸುತ್ತಿದ್ದು, ಸದರಿಯವರ ಹೆಂಡತಿ ಅನಾರೋಗ್ಯಕ್ಕೆ ತುತ್ತಾಗಿ ವರ್ಷಗಳ ಹಿಂದೆ ಮೃತಪಟ್ಟಿದ್ದಳು. ಅದನ್ನೆ ಜಾಸ್ತಿ ಮನಸ್ಸಿಗೆ ಹಚ್ಚಿಕೊಂಡು, ದಿನಾಂಕ.11-10-2022 ರಂದು ರಾತ್ರಿ 8.00 ಗಂಟೆ ಸುಮಾರು ವೀರೇಂದ್ರ ಪಾಟೀಲ್ ಈತನು ಬೆಂಗಳೂರಿಗೆ ಹೋಗಿ ಕಿವಿ ತೋರಿಸಿಕೊಂಡು ಬರುತ್ತೇನೆಂದು ಹೋಗಿ ಕಾಣೆಯಾಗಿದ್ದು ಈ ಕುರಿತು ಮಸ್ಕಿ ಪೊಲೀಸ್ ಠಾಣೆಯಲ್ಲಿ ಅ ಸಂಖ್ಯೆ 07/2023 ಕಲಂ ಮನುಷ್ಯ ಕಾಣೆ ಪ್ರಕರಣ ದಾಖಲಾಗಿದ್ದು ಇರುತ್ತದೆ.

ಇವರುಗಳ ಮಾಹಿತಿ ತಿಳಿದು ಬಂದಲ್ಲಿ ಮಸ್ಕಿ ಪೊಲೀಸ್ ಠಾಣೆಗೆ ಮಾಹಿತಿ ನೀಡಲು ಕೋರಿದೆ.

9480803834,8147638834, ಮೂಲಕ ಮಾಹಿತಿ ನೀಡಲು ಮಸ್ಕಿ ಪೊಲೀಸ್ ಠಾಣೆಯ ಪ್ರಕಟಣೆ ಕೋರಿದೆ.

ಜಿಂದಾಲ್ ಕಂಪನಿಗೆ ಭೂಮಿ ಮಾರಾಟಕ್ಕೆ ಕರ್ನಾಟಕ ರೈತ ಸಂಘ (ಎಐಕೆಕೆಎಸ್) ವಿರೋಧ

• **ಸುದ್ದಿಮೂಲ ವಾರ್ತೆ** ಮಸ್ಕಿ, ಆ.27: ಬಳ್ಳಾರಿ ಜಿಲ್ಲೆಯ ತೋರಣಗಲ್ಲು-ಕುರೇಕುಪ್ಪ ಪ್ರದೇಶದಲ್ಲಿ ನಿರ್ಮಿಸಲಾಗಿರುವ ಜಿಂದಾಲ್ ಸ್ಟೀಲ್ ಕಂಪನಿಗೆ 3,667 ಎಕರೆ ಜಮೀನನ್ನು ಮಾರಾಟ ಮಾಡಲು ನಿರ್ಧರಿಸುವ ಸಚಿವ ಸಂಪುಟದ ಕ್ರಮವನ್ನು ಕರ್ನಾಟಕ ರೈತ ಸಂಘ (ಎಐಕೆಕೆಎಸ್) ತೀವ್ರವಾಗಿ ವಿರೋಧಿಸಿದೆ.



ಈ ಕುರಿತು ಜಂಟಿ ಪತ್ರಿಕಾ ಹೇಳಿಕೆ ನೀಡಿರುವ ಮಸ್ಕಿ ತಾಲೂಕು ಅಧ್ಯಕ್ಷ ಸಂತೋಷ್ ಹಿರೇದಿನ್ನಿ,ಈ ಕೂಡಲೇ ಸಚಿವ ಸಂಪುಟದ ನಿರ್ಣಯ ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರದೇಶದಲ್ಲಿ ಅಭಿವೃದ್ಧಿಪಡಿಸಿದ ಜಮೀನುಗಳ ಬೆಲೆಯು ಒಂದು ಎಕರೆಗೆ ಕನಿಷ್ಠವೆಂದರೂ 3 ಕೋಟಿ ಇದೆ. ಅದರಂತೆ ಜಿಂದಾಲ್ ಕಂಪನಿಗೆ ನೀಡುವ ಒಟ್ಟು 3,667 ಎಕರೆಯ ಈಗಿನ ಮಾರಾಟದ ಮೌಲ್ಯ 11,001 ಕೋಟಿಯಾಗುತ್ತದೆ. ಅಭಿವೃದ್ಧಿಪಡಿಸಲಾದ ಮೊತ್ತ ಶೇ 40 ಕಳೆದರೂ ಅದರ ಮೌಲ್ಯ ಸುಮಾರು 7 ಸಾವಿರ ಕೋಟಿಗಳಾಗುತ್ತದೆ. ಆದರೆ, ಸರ್ಕಾರ ಈಗ 1,667 ಎಕರೆಗೆ ಕೇವಲ 1.20 ಲಕ್ಷದಂತೆ 24.40 ಕೋಟಿ ನಿಗದಿಪಡಿಸಿದೆ. ಉಳಿದ 2,000 ಎಕರೆಗೆ ಕೇವಲ 1.5 ಲಕ್ಷದಂತೆ ಸುಮಾರು 25 ಕೋಟಿ ನಿಗದಿಪಡಿಸಿ, ಒಟ್ಟು 50 ಕೋಟಿಗೂ ಕಡಿಮೆ ದರಕ್ಕೆ ಮಾರಾಟ ಮಾಡಲು ಮುಂದಾಗಿರುವುದು ಖಂಡನೀಯ ಎಂದಿದ್ದಾರೆ.

ಲೀಸ್ ಕಂ ಸೇಲ್ ಒಪ್ಪಂದದ ಮೂಲಕ ಹಳೆಯ ದರಕ್ಕೆ ಮಾರಾಟ ಮಾಡುವ ಅಕ್ರಮವು ಅಕ್ಷಮ್ಯವಾಗಿದೆ.

ಈ ಕೂಡಲೇ ಒಪ್ಪಂದ ರದ್ದುಪಡಿಸಬೇಕು. ಈ ಅಕ್ರಮ ಒಪ್ಪಂದವು ಭ್ರಷ್ಟಾಚಾರದ ಬಹುದೊಡ್ಡ ಹಗರಣವಾಗಿದೆ. ಈ ಹಿಂದೆ ಬಿಜೆಪಿ-ಜೆಡಿಎಸ್ ಮೈತ್ರಿ ಸರ್ಕಾರ ಅಧಿಕಾರದಲ್ಲಿದ್ದಾಗ ಜಿಂದಾಲ್ ಕಂಪನಿಗೆ ಈ ಜಮೀನುಗಳ ಶುದ್ಧ ಕ್ರಯ ಪತ್ರ ಮಾಡಿಕೊಳ್ಳುವ ಕ್ರಮವನ್ನು ಕಾಂಗ್ರೆಸ್ ಪಕ್ಷ ತೀವ್ರವಾಗಿ ವಿರೋಧಿಸಿತ್ತು. ಇದೀಗ ಅದೇ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು ತಾವು ವಿರೋಧಿಸಿದ್ದಕ್ಕೇ ಒಪ್ಪಿಗೆ ನೀಡುವ ಮೂಲಕ ಕಾಂಗ್ರೆಸ್ ತನ್ನ ಎಡಬಿಡಂಗಿತನದ ನಿಲುವು ಪ್ರದರ್ಶಿಸಿದೆ.ಈ ರಾಜ್ಯದ ಜನರ ಬೆನ್ನಿಗೆ ಚೂರಿ ಹಾಕುವ ಕೆಲಸ ಅಲ್ಲವೇ ಮನಃಸಾಕ್ಷಿ ಇದ್ದರೆ ಕೂಡಲೇ ಜಿಂದಾಲ್ ಕುಟುಂಬದ ಕಂಪನಿಗೆ ಭೂಮಿ ಕೊಡುವುದನ್ನ ನಿಲ್ಲಿಸಿ ಇಲ್ಲದಿದ್ದರೆ ನಮ್ಮ ಕರ್ನಾಟಕ ರೈತ ಸಂಘ ಹಾಗೂ ಇತರ ಜನಪರ ಸಂಘಟನೆಗಳೊಡಗೂಡಿ ರಾಜ್ಯದಾದಂತ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪರಿಸರ ಸ್ನೇಹಿ ಗಣೇಶ ಮೂರ್ತಿಗಳು ಪ್ರತಿಷ್ಠಾಪಿಸಿ - ಡಿಸಿ ಶರ್ಮಾ



• **ಸುದ್ದಿಮೂಲ ವಾರ್ತೆ** ಬೀದರ್, ಆ.27: ಪರಿಸರ ಸ್ನೇಹಿ ಮಣ್ಣಿನಿಂದ ಮಾಡಿದ ಗಣೇಶ ಮೂರ್ತಿಗಳ ಪ್ರತಿಷ್ಠಾಪನೆ ಮಾಡಿ ಇದರಿಂದ ಪರಿಸರಕ್ಕೆ ಯಾವುದೇ ಹಾನಿಯಾಗುವುದಿಲ್ಲ ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಹೇಳಿದರು.

ಸೋಮವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಬೀದರ ನಗರದ ವಿವಿಧ ಗಣೇಶ ಮಹಾಮಂಡಳಿಯ ಅಧ್ಯಕ್ಷರು, ಸದಸ್ಯರು ಹಾಗೂ ಪದಾಧಿಕಾರಿಗಳಿಗೆ ಕರೆದ ಗಣೇಶ ಚತುರ್ಥಿ ಶಾಂತಿಪಾಲನಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಓಪಿ) ಗಣೇಶ ಮೂರ್ತಿಗಳ ಪ್ರತಿಷ್ಠಾಪನೆ ಮಾಡಬಾರದು ಇದರಿಂದ ಪರಿಸರಕ್ಕೆ ಹಾನಿಯಾಗಲಿದೆ. ಮಣ್ಣಿನಿಂದ ತಯಾರಿಸಿದ ಉತ್ತಮ ಪರಿಸರ ಸ್ನೇಹಿ ಗಣೇಶ ಪ್ರತಿಷ್ಠಾಪನೆ ಮಾಡುವವರಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನವನ್ನು ನೀಡಲಾಗುವುದು. ಲೌಡ ಸ್ಪೀಕರ್ ರಾತ್ರಿ 10 ಗಂಟೆಗಳವರೆಗೆ ಉಪಯೋಗಿಸಬೇಕು ಮತ್ತು ಹೆಚ್ಚು ಶಬ್ದವನ್ನು ಇಟ್ಟು ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ಹೇಳಿದರು.

ಗಣೇಶ ಹಬ್ಬಕ್ಕೆ ಪೊಲೀಸ್, ನಗರಸಭೆ, ಜೆಸ್ಕಾಂ ಹಾಗೂ ಸಂಬಂಧಿಸಿದ ಇಲಾಖೆಯವರು ಅನುಮತಿ ನೀಡುತ್ತಾರೆ. ಸರ್ಕಾರದ ನಿರ್ದೇಶನಗಳನ್ನು ಪಾಲನೆ ಮಾಡುವ ಮೂಲಕ ಪ್ರತಿ ವರ್ಷದಂತೆ ಈ ವರ್ಷವು ಸೆಪ್ಟೆಂಬರ್ 7 ರಿಂದ 11 ರವರೆಗೆ ನಡೆಯುವ ಗಣೇಶ ಹಬ್ಬವನ್ನು ಬೀದರ ಜಿಲ್ಲೆಯಲ್ಲಿ ಅರ್ಥಪೂರ್ಣವಾಗಿ ಎಲ್ಲರೂ ಸೇರಿ ಆಚರಿಸೋಣ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಈ ಸಭೆಯಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ್ ಬದೋಲೆ, ಅಪರ ಜಿಲ್ಲಾಧಿಕಾರಿ ಶಿವಕುಮಾರ ಶೀಲವಂತ, ಬೀದರ ಸಹಾಯಕ ಆಯುಕ್ತ ಲವೀಶ್ ಓರಡಿಯಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಹೇಶ ಮೆಘಣ್ಣವರ, ಡಿವೈಎಸ್ಪಿ ಶಿವನಗೌಡ ಪಾಟೀಲ ಹಾಗೂ ನಗರಸಭೆ. ಜೆಸ್ಕಾ ಸೇರಿದಂತೆ ಇತರೆ ಇಲಾಖೆಯ ಅಧಿಕಾರಿಗಳು ಮತ್ತು ಬೀದರ ನಗರದ ವಿವಿಧ ಗಣೇಶ ಮಹಾಮಂಡಳಿಯ ಅಧ್ಯಕ್ಷರು. ಸದಸ್ಯರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

SHILPA MEDICARE LIMITED

Innovating for affordable healthcare

Registered Office: #12-6-214/A-1, Shilpa House, Hyderabad Road, Raichur - 584 135, Karnataka
Phone: +91 8532-238704; E-Mail: cs@vbshilpa.com;
Website: http://www.vbshilpa.com CIN No. L85110KA1987PLC008739

Notice of 37thAnnual General Meeting and E-voting Information

NOTICE IS HEREBY given that the 37th Annual General Meeting ("AGM") of the Company is scheduled to be held on Tuesday, 17th September, 2024at 10.00 A.M. (IST) through Video Conferencing ("VC") / Other Audio Visual Means ("OAVM")without physical presence of the members at a common venue, in compliance with the provisions of the Companies Act, 2013 and the Rules made thereunder, Ministry of Corporate Affairs (MCA) vide General Circular No. 2/2022 dated May 5, 2022 read with General Circular Nos. 20/2020 dated May 5, 2020, 2/2021 dated January 13, 2021, 19/2021 dated December 8, 2021 and 21/2021 dated December 14, 2021 and Securities and Exchange Board of India (SEBI) vide Circular Nos.SEBI/HO/CFD/CMD1/CIR/P/2020/79 dated May 12, 2020 and SEBI/HO/CFD/CMD2/CIR/P/2022/62 dated May 13, 2022 (collectively referred to as 'the Circulars'.

In compliance with the said MCA circulars and SEBI Circular, the Company has sent the Notice of the AGM and Annual Report 2023-24 on 26 August, 2024 through electronic mode to all the members whose email IDs are registered with the Company / Depository Participant(s). These documents are also available on the website of the Company at https:// www.vbshilpa.com, website of the Stock Exchanges i.e. BSE Limited (www.bseindia.com) and National Stock Exchange of India Limited (www.nseindia.com) and on the website of Share Transfer Agent of the Company viz. KFin Technologies Limited (hereinafter referred to as 'KFin') at https://evoting.kfintech.com/.

Members will be able to attend the AGM through VC/OAVM at http//:emeetings.kfintech.com by using their remote e-voting login credentials. Information and instructions including the details of user id and password relating to e-voting have been sent to the Members through e-mail. The same login credentials should be used for attending AGM through VC/OAVM.

Pursuant to provisions of Section 108 of the Companies Act, 2013 and Rule 20 of the Companies (Management and Administration) Rules, 2014 as amended and Regulation 44 of the SEBI (Listing Obligations and Disclosure Requirements) Regulations, 2015, members holding shares in physical or dematerialised form, as on the cut-off date i.e. 11th September, 2024, may cast their votes electronically on the business as set out in the Notice of AGM through e-voting platform of KFin- https://evoting.kfintech.com/.

The instructions for joining the AGM and the manner of participation in the remote e-voting or casting vote through electronic means at the said AGM are provided in the Notice convening the AGM. Members participating through VC/OAVM shall be counted for the purpose of reckoning the quorum under Section 103 of the Companies Act, 2013.

In this regard, the Members are hereby further notified that:

a) Remote e-voting through electronic means shall commence from Saturday, 14thSeptember 2024 at 09:00 am (IST) and ends on Monday, 16 September 2024 at 05:00 pm. (IST).

b) Cut-off date for the purpose of e-voting/dividend shall be Wednesday 11th September, 2024

c) Persons who have acquired shares and become members of the Company after the dispatch of Notice and who are eligible shareholders as on the cut-off date i.e. Wednesday, 11th September, 2024 ,may obtain login-id and password in the manner as provided in the notice of AGM which is available on the Company's website and on the website of KFintech.However, if the Member is already registered for e-voting then the existing user id and password can be used for remote e-voting. A person who is not a Member as on the Cut-Off Date should treat the Notice of the AGM for information purposes only.

d) Remote e-voting through electronic means shall not be allowed beyond Monday, 16thSeptember 2024

e) Members present at the meeting through VC / OAVM facility and who had not cast their votes on the resolutions through remote e-voting and are otherwise not barred from doing so, shall be eligible to vote through e-voting system during the AGM. The instructions for attending the AGM through VC/ OAVM are provided in the Notice of the AGM.

f) Members who have cast their votes by remote e-voting prior to the AGM may also attend/ participate in the AGM through VC/OAVM facility, but shall not be allowed to cast their votes again.

g) A person whose name is recorded in the register of members or in the register of beneficial owners maintained by the depositories as on the cut-off date only shall be entitled to avail of the facility of remote e-voting as well as e-voting during the AGM.

h) In case of any grievance in connection with the facility for remote e-voting, the shareholders may contact the following persons or refer to the Frequently Asked Questions (FAQs) section/e-voting user manual for shareholders available at the Downloads section on https://evoting.kfintech.com.

For permanent registration of e-mail addresses, the Members holding shares in demat form are requested to update the same with their respective DP and in case of Members holding the shares in physical form are requested to update the same with the RTA by submitting form ISR-1. ISR forms can be downloaded from the web linkhttps://www.vbshilpa.com/pdf/Form_ISR-1.pdf

Notice pursuant to Section 91 of the Companies Act, 2013 read with Rule 10 of the Companies (Management and Administration) Rules, 2014 and Regulation 42 of the Securities Exchange Board of India (Listing Obligations and Disclosure Requirements) Regulations, 2015, is also hereby given that the Register of Members and Share Transfer books of the Company will remain closed from Monday 9th September 2024 to Tuesday 17thSeptember 2024(both the days inclusive) for 37th Annual General Meeting of the Company.

Place : Raichur.
Date : 27thAugust, 2024.

For Shilpa Medicare Limited
Sd/- Ritu Tiwary
Company Secretary &
Compliance Officer